ಸಾಕ್ಷಿಯನ್ನು ದಿಃ10.06.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ. ಕೆ.ಆರ್.ವಿ. ವಕೀಲರಿಂದಃ**

1. ನಾನು ಸೌದೆ ಅಳತೆ ಮಾಡುವ ವೃತ್ತಿ ಮಾಡುತ್ತಿದ್ದೇನೆ. ಈ ಹಿಂದೆ ಟಿಂಬರ್ ವ್ಯಾಪಾರ ಮಾಡುತ್ತಿದ್ದೆನು. ನಾನು ಟಿಂಬರ್ ವ್ಯಾಪಾರ ಮಾಡುತ್ತಿದ್ದಾಗ ವಾರಕ್ಕೆ ರೂ.3 ರಿಂದ 5 ಸಾವಿರದಷ್ಟು ದುಡಿಯುತ್ತಿದ್ದೆನು. ನಾನು ಟಿಂಬರ್ ವ್ಯಾಪಾರ ಬಿಟ್ಟು 3 ವರ್ಷ ಆಗಿರುತ್ತದೆ. ಪ್ರಸ್ತುತ ನಾನು ಮಾಸಿಕ ರೂ.12 ಸಾವಿರ ಸಂಪಾದಿಸುತ್ತಿದ್ದೇನೆ. ನಾನು ಬಿ.ಕಾಂ ಪದವೀಧರ ಇರುತ್ತೇನೆ. ನನ್ನ ಹೆಂಡತಿಯಾದ ಅರ್ಜಿದಾರರು ಕಾಲೇಜ್ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನನ್ನ ಹಾಗೂ ನನ್ನ ಕುಟುಂಬದವರ ವಿರುದ್ದ ಅರ್ಜಿದಾರರು ವರದಕ್ಷಿಣೆ ಕಿರುಕುಳ ಪ್ರಕರಣವನ್ನು ದಾಖಲಿಸಿ ಅದು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ.

3. ನಾವು ಮದುವೆಯಾದ ನಂತರ ಸುಮಾರು 3-4 ತಿಂಗಳುಗಳ ಕಾಲ ಒಟ್ಟಿಗೆ ದಾಂಪತ್ಯ ಜೀವನವನ್ನು ನಡೆಸಿರುತ್ತೇವೆ. ನಾವಿಬ್ಬರೂ ಜೊತೆಯಲ್ಲಿ ವಾಸವಿದ್ದ ಕಾಲಕ್ಕೆ ಮಾಸಿಕ ರೂ. 12,000/-ಗಳಷ್ಟು ಖರ್ಚಿಗೆ ಹಣ ಬೇಕಾಗಿತ್ತು. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಪ್ರತ್ಯೇಕವಾಗಿದ್ದರೆ ಮಾಸಿಕ ಎಷ್ಟು ಹಣ ಖರ್ಚಿಗೆ ಬೇಕಾಗುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಕ್ಯಾನ್ಸರ್ ನಿಂದ ಬಳಲುತ್ತಿದ್ದು ಅವರಿಗೆ ಸುಮಾರು ರೂ.45 ಲಕ್ಷದಷ್ಟು ಹಣ ಖರ್ಚು ಮಾಡಿರುತ್ತೇನೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿಸಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರು ನೀಡಿದ ದೂರಿನ ಮೇರೆಗೆ ನಾನು ಠಾಣೆಗೆ ಹಾಜರಾಗಿ ಆಕೆಯನ್ನು ಚೆನ್ನಾಗಿ

ನೋಡಿಕೊಳ್ಳುತ್ತೇನೆ ಮತ್ತು ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ ಎಂದು ಮುಚ್ಚಳಿಕೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

4. ಅರ್ಜಿದಾರಳು ಹೇಳದೇ ಕೇಳದೇ ತನ್ನ ಮೊಬೈಲ್ ಸ್ವಿಚ್ ಆಫ್ ಮಾಡಿ ತವರು ಮನೆಗೆ ಹೋಗಿರುತ್ತಾಳೆ ಎಂದು ಕಾಣಿಸಲು ದಾಖಲೆ ಹಾಜರುಪಡಿಸಿಲ್ಲ. ಪ್ರಸ್ತುತ ಅರ್ಜಿದಾರರು ಮೈಸೂರಿನ ಟೆರಿಶಿಯನ್ ಕಾಲೇಜ್ ನಲ್ಲಿ ಅಂತಿಮ ವರ್ಷದ ಪದವಿ ಓದುತ್ತಿದ್ದಾರೆ ಎಂದರೆ ಸರಿ. ಅರ್ಜಿದಾರರ ಕಾಲೇಜ್ ಮತ್ತು ವಿದ್ಯಾರ್ಥಿನಿ ನಿಲಯದ ಖರ್ಚು ವೆಚ್ಚ ವಾರ್ಷಿಕ ಸುಮಾರು ರೂ.1 ಲಕ್ಷ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರರ ಕುಟುಂಬದವರು ಮದುವೆ ಕಾಲಕ್ಕೆ ನನಗೆ 1,15,000/- ಬೆಲೆ ಬಾಳುವ ರಾಡೋ ವಾಚ್, 22 ಗ್ರಾಂ ತೂಕದ ಚಿನ್ನದ ಸರ, 10 ಗ್ರಾಂ ತೂಕದ 2 ಚಿನ್ನದ ಉಂಗುರ ಮತ್ತು ನಮ್ಮ ಬೇಡಿಕೆಯಂತೆ ಅರ್ಜಿದಾರರಿಗೆ 80 ಗ್ರಾಂ ತೂಕದ ನೆಕ್ಲೆಸ್, 33 ಗ್ರಾಂ ತೂಕದ ಚಿನ್ನದ ಬಳೆ, 35 ಗ್ರಾಂ ತೂಕದ 2 ಸೆಟ್ ಕಿವಿಯ ಓಲೆಗಳು 23 ಗ್ರಾಂ ತೂಕದ ಒಟ್ಟು 5 ಚಿನ್ನದ ಉಂಗುರಗಳನ್ನು ನೀಡಿರುತ್ತಾರೆ ಅಲ್ಲದೇ ವಿವಾಹಕ್ಕಾಗಿ ರೂ.20 ಲಕ್ಷಗಳನ್ನು ಖರ್ಚು ಮಾಡಿ ನನಗೆ ರೂ.5 ಲಕ್ಷ ವರದಕ್ಷಿಣೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನನಗೆ 1 ರೆಡೋ ವಾಚ್, 18 ಗ್ರಾಂ ತೂಕದ ಚಿನ್ನದ ಚೈನ್ ಮತ್ತು 1 ಚಿನ್ನದ ಉಂಗುರ ಮಾತ್ರ ನೀಡಿರುತ್ತಾರೆ ಮತ್ತು ಸದರಿ ಉಂಗುರದ ತೂಕ ನನಗೆ ಗೊತ್ತಿರುವುದಿಲ್ಲ ಎಂದು ಸಾಕ್ಷ್ಯನುಡಿಯುತ್ತಾರೆ.

5. ಅರ್ಜಿದಾರಳಿಗೆ ನಾನು ಹಿಂಸೆಯನ್ನು ಕೊಟ್ಟಿದ್ದು ಆಕೆಯಲ್ಲಿ ರೂ.5 ಲಕ್ಷಗಳನ್ನು ವರದಕ್ಷಿಣೆ ರೂಪವಾಗಿ ತರುವಂತೆ ಕೇಳಿದ್ದು ಆ ಸಮಯದಲ್ಲಿ ಅರ್ಜಿದಾರಳ ತಂದೆ ರೂ.4 ಲಕ್ಷಗಳನ್ನು ಕೆನರಾ ಬ್ಯಾಂಕ್ ನಿಂದ ಸಾಲ ಪಡೆದುಕೊಂಡು ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಈಗ ಮೃತರಾಗಿರುತ್ತಾರೆ. ಪಂಚವಳ್ಳಿ ಗ್ರಾಮದಲ್ಲಿ ನಮಗೆ ಕೃಷಿ ಜಮೀನುಗಳಿದ್ದು ಅದರಲ್ಲಿ ಶುಂಠಿ ಹಾಗೂ ಹೊಗೆಸೊಪ್ಪು ಬೆಳೆ ಬೆಳೆಯುತ್ತಿದ್ದು ವಾರ್ಷಿಕ ಆದಾಯ ಸುಮಾರು ರೂ.15 ಲಕ್ಷ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಒಟ್ಟು ಕುಟುಂಬದ ಪರವಾಗಿ ನಾವು 2 ಕಾರ್, 2 ಬೈಕ್ ಮತ್ತು 2 ಟ್ರ್ಯಾಕ್ಟರ್ ಗಳನ್ನು ಹೊಂದಿರುತ್ತೇವೆ ಎಂದರೆ ಸರಿಯಲ್ಲ. ಆರ್ಥಿಕವಾಗಿ ನಾನು ಬಲಾಢ್ಯನಾಗಿದ್ದು ಅರ್ಜಿದಾರಳು ತನ್ನ ಅರ್ಜಿಯಲ್ಲಿ ಕೋರಿದ ಜೀವನಾಂಶವನ್ನು ಕೊಡಲು ಬದ್ಧನಾಗಿರಬೇಕು ಎಂದರೆ ಸರಿಯಲ್ಲ. ಅರ್ಜಿದಾರಳು ಹೇಳದೇ ಕೇಳದೇ ತನ್ನ ಮೊಬೈಲ್ ಸ್ವಿಚ್ ಆಫ್ ಮಾಡಿ ತವರು ಮನೆಗೆ ಹೋಗಿರುತ್ತಾಳೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಾನು ಕೆಲಸ ಮುಗಿಸಿಕೊಂಡು ಮನೆಗೆ ಬರುವಾಗ ರಾತ್ರಿ ಸುಮಾರು 8 ರಿಂದ 9 ಗಂಟೆ ಆಗುತ್ತಿದ್ದು ಆ ಸಮಯದಲ್ಲಿ ಮನೆಯಲ್ಲಿ ಆಕೆ ಇರುತ್ತಿರಲಿಲ್ಲ, ಆಕೆಯ ತಂದೆಗೆ ಫೋನ್ ಮಾಡಿ ವಿಚಾರಿಸಿದರೆ ಅಷ್ಟು ತಡವಾಗಿ ಮನೆಗೆ ಬರುತ್ತೀಯಾ, ನಿನಗೆ ಹೆಂಡತಿ ಯಾಕೆ ಬೇಕು ಎಂದು ಹೇಳಿ ನನ್ನನ್ನು ವಾಪಸ್ ಕಳುಹಿಸುತ್ತಿದ್ದರು ಎಂದು ಸಾಕ್ಷ್ಯ ನುಡಿಯುತ್ತಾರೆ. ಹೆಚ್ಚಿನ ಚಿನ್ನ ಮತ್ತು ಹಣ ತರುವಂತೆ ನಾನು ಅರ್ಜಿದಾರಳನ್ನು ಬೇಡಿಕೆ ಇಟ್ಟಿದ್ದರಿಂದ, ನೀನು ಚೆನ್ನಾಗಿಲ್ಲ, ದಪ್ಪ ಇದ್ದೀಯಾ ಎಂದೆಲ್ಲಾ

ಅವಮಾನಿಸಿ ಆಕೆಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿದ್ದರಿಂದ ಆಕೆ ತವರು ಮನೆಗೆ ಹೋಗಿರುತ್ತಾಳೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ